ಕೂಗಾಡತೊಡಗಿದ್ದೇ, ಅಲ್ಲಿಯ ವ್ಯವಸ್ಥಾಪಕರು ಕಸಿವಿಸಿಗೊಂಡರು. ಈಗ ಅಲ್ಲಿದ್ದ ಬೇರೆ ಬೇರೆ ದಂಪತಿಗಳು ಇವರನ್ನೇ ಮಿಕಿ ಮಿಕಿ ನೋಡಲಾರಂಭಿಸಿದರು. ಇಡೀ ವಾತಾವರಣವೇ ಕಲುಷಿತವಾದದ್ದು ಕಂಡು ಸಂಘಟಕರು ಇಬ್ಬರನ್ನೂ ಎದ್ದು ನಿಲ್ಲಿಸಿ ಒಂದು ಗಿಫ್ಟ್ ಪ್ಯಾಕ್ ಕೊಟ್ಟು ಎಲ್ಲರಿಂದ ಚಪ್ಪಾಳೆ ಹೊಡೆಸಿದ್ದರು. ವಿಶ್ವನಾಥನಿಗೆ ಅದೇ ವಿನಯದಿಂದ ಶೇಕ್‌ಹ್ಯಾಂಡ್ ಮಾಡಿದ ಚೇತನ 'ಥ್ಯಾಂಕ್ಯು ಸಾರ್, ನೀವು ಬಂದದ್ದು ನಮಗೆ ತುಂಬಾ ಸಂತೋಷ, ಪುನಃ ಬನ್ನಿ' ಎಂದು ರೂಢಿಯಂತೆಯೇ ಹೇಳಿಬಿಟ್ಟಿದ್ದ. 'ಮತ್ತೇನು ಬರುವುದು ಇಲ್ಲಿ? ಸಾರ್ವಜನಿಕರಿಗೆ ಮೋಸ ಮಾಡುತ್ತೀರಿ, ನಮ್ಮ ವೇಳೆ ಹಾಳುಮಾಡುತ್ತೀರಿ ನೀವು, ಒಂದು ಜ್ಯೂಸು ಒಂದು ಕಾಫಿ ಬಿಟ್ಟೀ ಕೊಟ್ಟ ಹಾಗೆ ಮಾಡಿ ನಮ್ಮನ್ನು ಸಾಲದಲ್ಲಿ ನರಳುವ ಹಾಗೆ ಮಾಡ್ತೀರಿ ನೀವು' ಅನ್ನುತ್ತ ವಿಶ್ವನಾಥ ಕಣ್ಣು ಇನ್ನಷ್ಟು ಕೆಂಪು ಮಾಡಿಕೊಂಡು ರಭಸದಲ್ಲೇ ಹೊರಬಂದಿದ್ದ. 'ಇದೆಲ್ಲ ಕಾಮನ್ ಇವೆಲ್ಲಾ ಕಾಮನ್' ಎನ್ನುತ್ತ ಸಂಘಟಕರು ಉಳಿದವರನ್ನು ಸಮಾಧಾನಪಡಿಸುತ್ತಿದ್ದರು.

ಹೆಂಡತಿಯನ್ನು ಜಗ್ಗಿಕೊಂಡು ಹೊರಬಂದ ವಿಶ್ವನಾಥ ಮೆಟ್ಟಿಲಿಳಿಯುತ್ತಿದ್ದಂತೆಯೇ ಗಿಫ್ಟ್ ಪ್ಯಾಕ್ ಒಡೆದು ನೋಡಿದ, ಆರು ಗಾಜಿನ ಬೌಲುಗಳಿದ್ದವು. 'ಇದಾದರೂ ಯಾತಕ್ಕಾದರೂ ಬಳಕೆಯಾಗ್ತದೆ ಬಾ, ಇಷ್ಟು ಹೊತ್ತು ನಮ್ಮ ಟೈಮ್ ವೇಸ್ಟ್ ಮಾಡಿದ್ದಕ್ಕೆ ಇದು ಗಿಫ್ಟ್ ಅಂತ ತಿಳಿಯುವ, ಯಾರಾದರೂ ಗೆಸ್ಟ್ ಬಂದಾಗ ಜಾಮೂನು ಮಾಡಿದರೆ ಇದರಲ್ಲೇ ಹಾಕಿಕೊಡುವಿಯಂತೆ' ಅಂತ ಮಾತಾಡಿಕೊಳ್ಳುತ್ತ ಇಬ್ಬರೂ ದಡ ದಡ ಬೈಕಿನೆಡೆಗೆ ಬರುವಷ್ಟರಲ್ಲಿ ಪುನಃ ಜಿಟಿಜಿಟಿ ಮಳೆ ಶುರುವಾಯ್ತು. ತೊಯ್ದೇವೆಂದರೂ ಪೂರ್ತಿ ತೋಯಿಸದ ಮಳೆ ಅದು. ಭ್ರಮಾಧೀನ ಪೊರೆ ಕಳಚುವ ಸಂದರ್ಭದ ಘಟನೆಗಳು ಮತ್ತೆ ಮತ್ತೆ ದೃಶ್ಯವಾಗಿ ಮೂಡಿ, ಇಬ್ಬರ ಪ್ರಜ್ಞೆಯ ಆಳದಲ್ಲೆಲ್ಲೋ ತಮ್ಮ ನಂಬಿಕೆಗೇ ಕೊಡಲಿಯೇಟು ಬಿದ್ದಂತೆ ಚಡಪಡಿಸಿಹೋದರು. ಇಬ್ಬರ ಮನಸ್ಸೂ ಎಲ್ಲ ಖಾಲಿ ಖಾಲಿ ಅನ್ನುವಂಥ ಒಂದು ಬಗೆಯ ಅನುಭೂತಿಯಲ್ಲಿ ಮೀಯುತ್ತಿತ್ತು. ಏನೂ ತಿಳಿಯಲಿಲ್ಲ ಅಂದುಕೊಂಡರೂ ಎಲ್ಲವೂ ತಿಳಿದುಹೋಗಿತ್ತು. ತಮಗರಿವಿಲ್ಲದೇ ನಿತಾಂತ ಮೌನಕ್ಕೆ ಶರಣಾಗಿದ್ದರು.

ಬರುವಾಗ ಇದ್ದ ಹುಮ್ಮಸ್ಸು ಇಬ್ಬರಲ್ಲೂ ಹೀಗೆ ಮರಳುವಾಗ ಉಳಿದಿರಲಿಲ್ಲ. ಮಂಜುಳಾ ಸಣ್ಣ ಮಳೆಗೆ ಸೆರಗನ್ನೇ ತಲೆಯ ಮೇಲೆ ಮರೆ ಮಾಡಿಕೊಂಡಳು. ಜರತಾರಿ ಸೀರೆಯ ಸೆರಗು ನೆಂದು ತೊಪ್ಪೆಯಾಗತೊಡಗಿ ಇದ್ದಲ್ಲೇ ಜರಿಗಳೆಲ್ಲ ಮುದುಗಿ ಹೋಗಿದ್ದವು. ವಿಶ್ವನಾಥ ತನ್ನ ಕಂಕುಳಲ್ಲಿದ್ದ ಹೆಲ್ಮೆಟ್ ಧರಿಸಿದ. ತುಂತುರು ತುಂತುರು ಮಳೆ. ಮನೆಗೆ ಬಂದು ಸೇರುವ ಹೊತ್ತಿಗೆಲ್ಲ ಪುನಃ ಹೆಲ್ಮೆಟ್ಟಿನ ಮುಂಭಾಗಕ್ಕೆ ನೀರ ಹನಿಗಳ ಮಾಲೆ ಕಟ್ಟಿನಿಂತಿತ್ತು. ಶಹರದ ರಸ್ತೆಯ ವಿದ್ಯುದ್ದೀಪಗಳು ಅದರಲ್ಲಿ ಝುಗಮಗ ಪ್ರತಿಫಲಿಸಿ, ವಿಶ್ವನಾಥನ ಕಣ್ಣಿಗೆ ಅವು ಒಮ್ಮೆಲೇ ಚಿನ್ನದ ಬಣ್ಣದ ಹನಿಗಳಂತೆ ಕಂಡವು.

## ಸುನಂದಾ ಪ್ರಕಾಶ ಕಡಮೆ

ಮನುಷ್ಯ ವ್ಯಾಪಾರವನ್ನು ಸೂಕ್ಷ್ಮವಾಗಿ, ಚಿತ್ರವತ್ತಾಗಿ ರೇಖಿಸುವ ಕಲೆಗಾರ್ತಿ ಸುನಂದಾ ಪ್ರಸ್ತುತ ಹುಬ್ಬಳ್ಳಿಯಲ್ಲಿ ನೆಲಸಿದ್ದಾರೆ. ಅವರ 'ಪುಟ್ಟಪಾದದ ಹೆಜ್ಜೆ ಗುರುತು', 'ಗಾಂಧಿ ಚಿತ್ರದ ನೋಟು', 'ಕಂಬಗಳ ಮರೆಯಲ್ಲಿ' ಕಥಾಸಂಗ್ರಹಗಳು, 'ಬರೀ ಎರಡು ರೆಕ್ಕೆ', 'ದೋಣಿ ನಡೆಸುವ ಹುಟ್ಟು' ಕಾದಂಬರಿಗಳು ಪ್ರಕಟವಾಗಿವೆ. ಕವಿತೆ, ಅಂಕಣ ಬರಹಗಳ ಪುಸ್ತಕಗಳನ್ನೂ ಅವರು ಪ್ರಕಟಿಸಿದ್ದಾರೆ. ಅವರ ಇತ್ತೀಚಿನ ಕಥಾಸಂಗ್ರಹ 'ತುದಿ ಮಡಚಿಟ್ಟ ಪುಟ'.